ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 682/2021

ಸಿ ಡಬ್ಲ್ಯೂ-1
ಪಿ ಡಬ್ಲ್ಯೂ-1

ದಿಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಚಂದ್ರೇಶ ನಾಯಕ
ತಂದೆಯ ಹೆಸರುಃ ನಾರಾಯಣ ನಾಯಕ
ವಯಸ್ಸುಃ 72 ವರ್ಷ
ಉದ್ಯೋಗಃ ನಿವೃತ್ತ ಸಹಾಯಕ ಅರಣ್ಯಾಧಿಕಾರಿ
ವಿಳಾಸಃ ಶೆಟಗೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನಾನು ಮಂಗಳೂರಿಗೆ ಮಕ್ಕಳನ್ನು ನೋಡಲು ಹಾಗೂ ವೈದ್ಯಕೀಯ ಉಪಚಾರಕ್ಕಾಗಿ ದಿಃ20-02-2021 ರಂದು ನನ್ನ ಮಗನ ಮನೆಯಲ್ಲಿ ವಾಸ್ತವ್ಯ ಮಾಡಿರುತ್ತೇನೆ. ಚಾಸಾ-9 ರವರು ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದರು. ನಾನು ಮನೆಯಲ್ಲಿ ಇರದೇ ಇರುವಾಗ ಅವರು ಮನೆಗೆ ಬಂದು ಸ್ವಚ್ಛ ಮಾಡಿ ಹೋಗುತ್ತಿದ್ದರು. ದಿಃ08-03-2021 ರಂದು ಚಾಸಾ-9 ರವರು ನಮ್ಮ ಮನೆಯ ಬಾಗಿಲು ತೆರೆದಿದ್ದನ್ನು ನೋಡಲಾಗಿ ಅವರು ನಮ್ಮಮನೆಯ ಲಗ್ತ ಇದ್ದ ಚಾಸಾ-4 ರವರಿಗೆ ಹೇಳಿದ್ದು, ಚಾಸಾ-4 ರವರು ನನಗೆ ಬೆಳಿಗ್ಗೆ 7.30 ಗಂಟೆಗೆ ಕರೆ ಮಾಡಿ, ನಿಮ್ಮ ಮನೆಯ ಬಾಗಿಲು ತೆರೆದಿದ್ದು ಕಂಡುಬಂದಿದ್ದು, ಅವರು ಅಲ್ಲಿ ಹೋಗಿ ನೋಡಲಾಗಿ ಕಳ್ಳತನವಾಗಿದ್ದರ ಬಗ್ಗೆ

ಕುರುಹುಗಳು ಕಂಡುಬಂದಿರುತ್ತವೆ ಎಂದು ತಿಳಿಸಿರುತ್ತಾರೆ. ಅದೇ ದಿನ ನಾನು ಸಂಜೆ 7 ಗಂಟೆಗೆ ಮಂಗಳೂರಿನಿಂದ ಹೊರಟು ಬಂದಿರುತ್ತೇವೆ. ಮನೆಯನ್ನು ನೋಡಲಾಗಿ ಮನೆಯ ಬಾಗಿಲು ಒಡೆದಿರುವುದು ಕಂಡುಬಂದಿರುತ್ತದೆ. ನಮ್ಮ ಮನೆಯ ಬೆಡ್ ರೂಮಿನಲ್ಲಿ ನೋಡಲಾಗಿ ಕಪಾಟಿನ ಕೀಲಿ ತೆರೆದು ಅದರಲ್ಲಿರುವ ಬಟ್ಟೆ ಬರೆಗಳು ಚೆಲ್ಲಾಪಿಲ್ಲಿ ಆಗಿರುತ್ತವೆ. ಮತ್ತು ಮೊದಲನೇ ಮಹಡಿಯ ಮೇಲಿದ್ದ ಕಪಾಟನ್ನು ಕೀಲಿಯಿಂದ ತೆಗೆದು, ಅದರಲ್ಲಿರುವ ಬಟ್ಟೆ ಬರೆಗಳನ್ನು ಚೆಲ್ಲಾಪಿಲ್ಲಿ ಮಾಡಿರುತ್ತಾರೆ. ಅದರಲ್ಲಿದ್ದ ಸುಮಾರು ರೂ.35,000/- ನಗದು ಹಣ ಕಳ್ಳತನವಾದ ಬಗ್ಗೆ ಕಂಡುಬಂದಿರುತ್ತದೆ. ನಂತರ ಪೊಲೀಸ್ ಠಾಣೆಗೆ ಹೋಗಿ ಸವಿಸ್ತಾರವಾಗಿ ದೂರನ್ನು ಬರೆದುಕೊಟ್ಟಿರುತ್ತೇನೆ. ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು.

2. ಅದೇ ದಿನ ಪೊಲೀಸರು ಬೆರಳಚ್ಚು ತಜ್ಞರು ಹಾಗೂ ಶ್ವಾನದಳದೊಂದಿಗೆ ಮನೆಗೆ ಬಂದು ಪರಿಶೀಲನೆ ಮಾಡಿ, ಬಾಗಿಲನ್ನು ಮುರಿದಿರುವುದನ್ನು ನೋಡಿ ಅದರ ಪೊಟೋವನ್ನು ತೆಗೆದುಕೊಂಡಿರುತ್ತಾರೆ. ನಂತರ ಪಂಚನಾಮೆಯನ್ನು ರಾತ್ರಿ 10.30 ರಿಂದ 11.45 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಮತ್ತು ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋಗಳನ್ನು ನೋಡಿ ಗುರುತಿಸಿದ್ದು, ಪೋಟೋಗಳನ್ನು ಪುರಾವೆಗೆ ಒಳಪಟ್ಟು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

3. ಮಾರನೇ ದಿನ ದಿಃ 09-03-2021 ರಂದು ನಮ್ಮ ಬೆಡ್ ರೂಮನ್ನು ಸ್ವಚ್ಛ ಮಾಡುವ ಸಮಯದಲ್ಲಿ ದೇವರ ಕೆಲಸಕ್ಕೆ ಉಪಯೋಗಿಸುವ ಒಂದು ನೆಕ್ಲೇಸ್, ಕರಿಮಣಿ ಸರ ಕಾಟ್ ನ ಕೆಳಗಡೆ ಬಿಸಾಕಿದ್ದರು. ನಂತರ ದಿಃ10-03-2021 ರಂದು ಪೊಲೀಸ್ ಠಾಣೆಗೆ ಹೋಗಿ ಈ ವಿಚಾರವಾಗಿ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಂತರ ದಿಃ15-07-2021 ರಂದು ಪೊಲೀಸರು ಆರೋಪಿತರನ್ನು ಮನೆಗೆ ಕರೆದುಕೊಂಡು ಬಂದು ಆರೋಪಿತರು ತಾವೇ ಬಾಗಿಲುಗಳನ್ನು ಮುರಿದಿರುವುದನ್ನು ಒಪ್ಪಿಕೊಂಡಿರುತ್ತಾರೆ. ನಂತರ ನಮ್ಮ ಬೆಡ್ ರೂಮೀಗೆ ಹೋಗಿ ಕಪಾಟಿನಲ್ಲಿ ಇದ್ದ ಬಂಗಾರದ ವಸ್ತುಗಳನ್ನು ಕಳ್ಳತನ ಮಾಡಿರುತ್ತೇವೆ ಎಂದು ಆರೋಪಿತರು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಮರುಹೇಳಿಕೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮರುಹೇಳಿಕೆಯನ್ನು ನಿಪಿ-6, ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದು ಆರೋಪಿಗಳಿಂದ ವಶಪಡಿಸಿಕೊಂಡ ನೆಕ್ಲೇಸ್ ನನಗೆ ತೋರಿಸಿರುತ್ತಾರೆ. ಸಾಕ್ಷಿಯು ನೆಕ್ಲೇಸನ್ನು ತೋರಿಸುತ್ತಿರುವ 2 ಪೊಟೋಗಳನ್ನು ಗುರುತಿಸಿದ್ದು, ಪೊಟೋಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ದಿಃ07-03-2021 ರದು ಚಾಸಾ-9 ಕೆಲಸದವರು ಬೆಳಿಗ್ಗೆ ಮತ್ತು ಸಂಜೆ ಬಂದು ಸ್ವಚ್ಛ ಮಾಡಿ ನಂತರ ಮಾರನೇ ದಿನ ಮನೆಯನ್ನು ಸ್ವಚ್ಛ ಮಾಡಲು ಬಂದಾಗ ಮನೆಯ ಬಾಗಿಲು ಒಡೆದಿರುವುದು ಆಕೆಗೆ ಕಂಡುಬಂದಿರುತ್ತದೆ. ದಿಃ07-03-2021 ರ ಮಧ್ಯ ರಾತ್ರಿ ಕಳ್ಳತನವಾಗಿರುವುದು ಖಾತ್ರಿಯಾಗಿರುತ್ತದೆ. ರಾಡಿನಿಂದ ಲಾಕ್ ಮುರಿದು ಕಳ್ಳತನ ಮಾಡಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ ರೂ.500/– ಖರ್ಚಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.